ಸಾಧ್ಯವಾಗುತ್ತಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಆಗಾಗ ಆಗತಕ್ಕಂಥ ವಿದ್ಯುತ್ ವೈಫಲ್ಯತೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಈಗಾಗಲೇ ನಮ್ಮಲ್ಲಿ ಇರತಕ್ಕಂಥ ಎಕ್ಸ್‌ಪ್ರೆಸ್ ಲೈನ್ ಮೂಲಕ ಷಟ್‌ಡೌನ್ ಆಗುವಂಥ ಸಂದರ್ಭದಲ್ಲಿ ಸ್ವಿಚ್‌ಒವರ್ ಮಾಡಿಕೊಂಡು ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ. ಆಗಾಗ ಫೇಲ್ಯೂರ್ ಆಗತಕ್ಕಂಥ ದೋಷಪೂರಿತ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತು ಸ್ಪೆಬಿಲೈಜರ್‌ಗಳನ್ನು ಸರಿಪಡಿಸಬೇಕು. ಕೆಲವು ಕಡೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸ್ಫೋಟವಾಗುತ್ತಿವೆ. ಹಾಗೆಯೇ ಫರ್ನಿಶ್ ವಾಯರ್ ಸರಿಯಿಲ್ಲದೇ ಇರುವುದರಿಂದ ಮೇನ್‌ಟೇನನ್ಸ್ ಕೂಡ ಸರಿಯಾಗಿ ಆಗುತ್ತಿಲ್ಲ. ಈ ರೀತಿಯಾದ ಹತ್ತು ಹಲವು ಸಮಸ್ಯೆಗಳು ನಮ್ಮ ಕಡೆ ಇವೆ. ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯಲ್ಲಿಯೂ ಕೂಡ ಬಹಳಷ್ಟು ತೊಂದರೆಗಳಿವೆ. ಆದ್ದರಿಂದ, ಇದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಹೆಚ್.ಯು.ಡಿ. ಮಿನಿಸ್ಟರ್‌ರವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿದ್ಯುತ್ ವೈಫಲ್ಯತೆ ನಮ್ಮಲ್ಲಿ ಹೆಚ್ಚಿಗೆ ಇರುವುದರಿಂದ ಒಂದು ಜನರೇಟರ್ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಸದಸ್ಯರು ಹೇಳಿದ ಪ್ರಕಾರ ಎಲ್ಲಾ ನಗರಗಳಲ್ಲಿಯೂ ಕೂಡ ಇದೇ ಸಮಸ್ಯೆ ಇರುವುದರಿಂದ, ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದರೆ ಒಂದು ಜನರೇಟರ್ ವ್ಯವಸ್ಥೆ ಮಾಡುವುದು ಸೂಕ್ತವಾಗಿರುತ್ತದೆ. ಬೇಸಿಗೆ ಸಮಯದಲ್ಲಿ ವಿದ್ಯುತ್ ನಿಖರವಾಗಿ ಸರಬರಾಜಾಗುವುದಿಲ್ಲ. ಇದರಿಂದ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಾಸವಾಗುತ್ತಿರುವುದರಿಂದ ಎಲ್ಲಾ ನಗರ ಪ್ರದೇಶಗಳಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಈ ಒಂದು ವಿಷಯದಲ್ಲಿ ಮಂಡ್ಯ ನಗರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್(ಇಂಧನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ವಿದ್ಯುತ್ ಸರಬರಾಜಿನಲ್ಲಿ ಸ್ವಲ್ಪ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸುವ ಸಲುವಾಗಿ ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತೇನಾದರೂ ತೊಂದರೆ ಇದ್ದಲ್ಲಿ ಅದನ್ನು ನಾನು ಸರಿಪಡಿಸುತ್ತೇನೆ.

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಸುಮಾರು ಐದಾರು ತಿಂಗಳಿಂದ ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ನಡುವೆ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರ ನಡುವೆ ಏನು ನಡೆಯಿತು ಎನ್ನುವುದು ಇಡೀ ಕರ್ನಾಟಕ ರಾಜ್ಯಕ್ಕೆ ಗೊತ್ತಿದೆ.

ಅಧ್ಯಕ್ಷರು: ಮೊನ್ನೆ ಒಂದೂವರೆ ಎರಡು ತಾಸು ಬೀದರ್ ಜಿಲ್ಲಾ ಪಂಚಾಯಿತಿ ಬಗ್ಗೆ ಮಾತನಾಡಿದ್ದೀರಿ. ಮತ್ತೆ ಅದನ್ನೇ ಮಾತನಾಡುತ್ತಿದ್ದೀರಿ. ಆದ್ದರಿಂದ ಈ ವಿಷಯ ಈಗಾಗಲೇ ಪ್ರಸ್ತಾಪ ಮಾಡಿರುವುದರಿಂದ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟರೆ ಹೇಳುತ್ತೇನೆ. ನೀವು ಬೇಡವೆಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಬೀದರ್ ಜಿಲ್ಲಾ ಪಂಚಾಯಿತಿಯ ಬಗ್ಗೆ ಮಾತನಾಡಬೇಕೆಂದು, ನಾವು 4-5 ಜನ ಕಾಲಿಂಗ್ ಅಟೆನ್‌ಷನ್‌ಗೆ ಸಹಿ ಮಾಡಿ ತಮಗೆ ಕಳುಹಿಸಿಕೊಡಲಾಗಿತ್ತು. ಆದರೆ ತಾವು ಇದಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಈಗಲೂ ಸಹ ನಾವು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೊಡದೆ ಇದ್ದರೆ ನಮ್ಮ ಸಮಸ್ಯೆಯನ್ನು ಯಾವ ರೀತಿಯಾಗಿ ಸರ್ಕಾರ ಗಮನವನ್ನು ಸೆಳೆಯಬೇಕು? ಒಬ್ಬ ಆಫೀಸರ್ ಕೂಡ ಅಲ್ಲಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಪ್ರತಿಯೊಂದು ಆಫೀಸರ್‌ಗಳಿಗೆ ಇವತ್ತು ವರ್ಗಾವಣೆ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿಯ ಸದಸ್ಯರು ರಾತ್ರಿ 12 ಗಂಟೆಗೆ ಕುಡಿದು ಹೋಗಿ ಆಫೀಸರ್‌ಗೆ ಹೊಡೆಯುತ್ತಿದ್ದಾರೆ. ಇವತ್ತಿನದಿವಸ ಬೀದರ್ ಜಿಲ್ಲಾ ಪಂಚಾಯಿತಿ ಹತ್ತಿ ಉರಿಯುತ್ತಿದೆ.

**MR. SPEAKER:** That matter is over.

(interruptions)

A matter which has been already raised, once should not be raised in the same session.

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಡಿಸ್‌ಕಸ್ ಮಾಡುತ್ತಿಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗುಂಡಪ್ಪ ವಕೀಲ್‌ರವರು ಅಧ್ಯಕ್ಷರ ಪೀಠದ ಬಳಿ ಧಾವಿಸಿದರು)

ಅಧ್ಯಕ್ಷರು: ಮಾನ್ಯ ಗುಂಡಪ್ಪ ವಕೀಲ್‌ರೆ, ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗುಂಡಪ್ಪವಕೀಲ್‌ರವರು ತಮ್ಮ ಸ್ಥಾನಕ್ಕೆ ಮತ್ತೆ ತೆರಳಿದರು)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬೇರೆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾರೆ.

ಅಧ್ಯಕ್ಷರು: ಆ ವಿಷಯ ಬಿಟ್ಟು ಬೇರೆ ವಿಷಯವಿದ್ದರೆ ಪ್ರಸ್ತಾಪ ಮಾಡಲಿ.

(ಗೊಂದಲ)

**SRI K.H. RANGANATH:** ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ಅಧ್ಯಕ್ಷರನ್ನು threaten ಮಾಡುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಅವರನ್ನು ಹೊರಗೆ ಕಳುಹಿಸಬೇಕಾಗುತ್ತದೆ. He can't threaten ಮಾನ್ಯ ಅಧ್ಯಕ್ಷರೆ, ತಮಗೆ ಬೇಕಾದಷ್ಟು ಅಧಿಕಾರ ಇದೆ, ತಾವು ಅದನ್ನು ಚಲಾಯಿಸಬೇಕು. This type of threatening is very bad.

224 ಜನ ಸದಸ್ಯರಿಗಿಂತ ಇವರೇನಾದರೂ ಮೇಲ್ಪಂಕ್ತಿಯಲ್ಲಿ ಇದ್ದಾರೆಯೇ? ಅಥವಾ ತಮಗಿಂತ ಮೇಲ್ಪಂಕ್ತಿಯಲ್ಲಿ ಈ ಸದನ ಮಾಡಿರುವ ಕಾನೂನಿಗಿಂತ ಇವರು ಮೇಲೆ ಇದ್ದಾರೆಯೇ? ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

**ಶ್ರೀ ಗುಂಡಪ್ಪ ವಕೀಲ್:** ಮಾತನಾಡುವುದಕ್ಕೆ ಅವಕಾಶಕೊಡಬೇಕೆಂದು ಕಾನೂನು ಇದೆ.

**MR. SPEAKER:** It is a different matter ಅಂತ ಹೇಳುತ್ತಿದ್ದಾರೆ ಬೇರೆ ವಿಷಯ ಇದೆ ಎಂದು ಅವರು ಮೊದಲೇ ಹೇಳಲಿಲ್ಲ.

(ಗೊಂದಲ)

**SRI K.H. RANGANATH:** He can't threaten like that ಇದು ತಮಾಷೆಯಾಗಿ ಬಿಟ್ಟಿದೆ, ಏನೋ ಒಂದು ಸಲ ನಡೆಯುತ್ತದೆಂದರೆ ಅದೇ ಹವ್ಯಾಸವಾಗಬಾರದು.

**ಶ್ರೀ ಗುಂಡಪ್ಪ ವಕೀಲ್:** ತಾವು ಈಲ್ಡ್ ಆಗಬೇಕು, ತಾವು ಈ ವಿಷಯ ಕೇಳಬೇಕು. ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಘಟನೆ ಬಗ್ಗೆ ತಾವು ಕ್ರಮ ಕೈಗೊಳ್ಳದಿರುವುದರಿಂದ ತಾಲ್ಲೂಕು ಪಂಚಾಯಿತಿಯಲ್ಲಿ ಕೂಡ ಅದೇ ರೀತಿ ಗಲಾಟೆಯಾಗಿದೆ.

(ಗೊಂದಲ)

**ಶ್ರೀ ಕೆ.ಹೆಚ್. ರಂಗನಾಥ್:** ಮಾನ್ಯ ಸದಸ್ಯರು ಕಾನೂನು ಪುಸ್ತಕವನ್ನು ಓದಿ ಅದರಂತೆ ನಡೆದುಕೊಳ್ಳುವುದನ್ನು ತಿಳಿದುಕೊಳ್ಳಬೇಕು, ನಿಮಗೆ ಅವಕಾಶವಿದೆ ಎಂದು ಇಲ್ಲಿ ಗೊಂದಲ ಮಾಡತಕ್ಕಂಥಾದ್ದು ಸರಿಯಲ್ಲ, ನಾವು ಇಲ್ಲಿ ಯಾರು ಸುಮ್ಮನೆ ಕುಳಿತುಕೊಳ್ಳಲು ಬಂದಿರುವುದಿಲ್ಲ.

**ಶ್ರೀ ಗುಂಡಪ್ಪ ವಕೀಲ್:** ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳಲು ಬಂದಿಲ್ಲ. ಜಿಲ್ಲಾ ಪಂಚಾಯಿತಿಯಲ್ಲಿ ಏನು ನಡೆದಿದೆ ಅದೇ ರೀತಿ ತಾಲ್ಲೂಕು ಪಂಚಾಯಿತಿಯಲ್ಲೂ ನಡೆದಿದೆ.

(ಗೊಂದಲ)

**MR. SPEAKER:** No conversation ನೀವು ಮೊದಲು ಮಾಡಿದ್ದು ತಪ್ಪು, ಬೇರೆ ವಿಷಯ ಇದೆ ಎಂದು ನೀವು ಮೊದಲೇ ಹೇಳಬೇಕಾಗಿತ್ತು.

**ಶ್ರೀ ಗುಂಡಪ್ಪ ವಕೀಲ್:** ಬಿಲ್ಲಾ ಸ್ವಾಮಿ, ನೀವು ಮಾತನಾಡಲು ನಮಗೆ ಅವಕಾಶ ಕೊಡುತ್ತಿಲ್ಲ.

**ಅಧ್ಯಕ್ಷರು:** ತಾವು ಬೇರೆ ವಿಷಯ ಇದೆಯೆಂದು ಹೇಳಿಲ್ಲ.

**ಶ್ರೀ ಗುಂಡಪ್ಪ ವಕೀಲ್:** ಇಲ್ಲಿ ಕೇಳಿರಿ, ಜಿಲ್ಲಾ ಪರಿಷತ್ತಿನಲ್ಲಿ ಏನು ಗದ್ದಲ ಆಗಿದೆ. ಕೇಳಿಸ್ವಾಮಿ.

ಶ್ರೀ ಕೆ.ಜೆಚ್. ರಂಗನಾಥ್: ಈ ಧೋರಣೆ ಏನು? Look at the tone, is it not threatening the chair? ಈ ಧ್ವನಿ ಏನು?

(ಗೊಂದಲ)

ಶ್ರೀ ಪಿ.ಆರ್. ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಧ್ವನಿ ದೊಡ್ಡದಾಗಿದೆ ಎಂದು ಜೋರಾಗಿ ಮಾತನಾಡಿದರೆ ಹೇಗೆ? ನಮ್ಮ ಧ್ವನಿ ಕೂಡ ದೊಡ್ಡದಾಗಿದೆ. ಆದರೆ ಮಾನ್ಯ ಸದಸ್ಯರು ಒಂದು ಸೌಜನ್ಯತೆಯಿಂದ ಮಾತನಾಡಬೇಕು, ಈ ರೀತಿ ಥ್ರೆಟನ್ ಮಾಡಬಹುದೆ? ಮಾತನಾಡುವಾಗ ತಾಳ್ಮೆ ಬೇಡವೆ? ನಿಯಮದ ಪ್ರಕಾರ ಮಾತನಾಡಲಿ. ಸಭಾಧ್ಯಕ್ಷರು ಮಾತನಾಡುವುದಕ್ಕೆ ಎಲ್ಲಾ ಸದಸ್ಯರಿಗೂ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದು, ಗಂಟೆಗಟ್ಟಲೆ ಮಾತನಾಡಿದರು ಸುಮ್ಮನೆ ಕೇಳಿದ್ದಾರೆ, ಇವತ್ತು ನೀವು ಅವರಿಗೆ ಈ ರೀತಿ ಮಾಡಬಹುದೆ? ಇಲ್ಲಿ ಅನೇಕ ಹಿರಿಯ ಸದಸ್ಯರು ಕುಳಿತಿದ್ದು ಅವರಿಂದ ನಾವು ಕಲಿಯಬೇಕಾದ್ದು ಬಹಳಷ್ಟಿದೆ. ಆ ತರಹ ಮಾತನಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ನನ್ನ ಮತಕ್ಷೇತ್ರದ ತಾಲ್ಲೂಕು ಪಂಚಾಯಿತಿಯಲ್ಲಿರುವ ಮೂರು ಪೋಸ್ಟಿಗೆ 18 ಜನ ಇಂಜಿನಿಯರ್‌ಗಳವರನ್ನು ಹಾಕಿದ್ದರು, ಒಂದೂವರೆ ವರ್ಷ ನಾನು ಫೈಟ್ ಮಾಡಿ ಹೆಚ್ಚುವರಿ ಪೋಸ್ಟ್‌ಗಳನ್ನು ವರ್ಗಾವಣೆ ಮಾಡಿಸಿದ್ದೇನೆ. ತಾಲ್ಲೂಕು ಪಂಚಾಯಿತಿ ಸದಸ್ಯರು, ಅವರನ್ನು ನಮ್ಮನ್ನು ಕೇಳದೆ ರಿಲೀವ್ ಮಾಡಬೇಡಿ ಎಂದು ಇ.ಇ ರವರ ಮೇಲೆ ಒತ್ತಡ ಹಾಕಿದ್ದರಿಂದಾಗಿ ಒಂದೂವರೆ ತಿಂಗಳ ಕಾಲ ರಿಲೀವ್ ಮಾಡದೆ ಕಾಯ್ದು ನಂತರ ನಾಲ್ಕು ಜನರನ್ನು ರಿಲೀವ್ ಮಾಡಿದ್ದಾರೆ. ನಮ್ಮನ್ನು ಕೇಳದೆ ಅವರನ್ನು ಹೇಗೆ ರಿಲೀವ್ ಮಾಡಿದಿರಿ ಎಂದು ರಾತ್ರಿ 12 ಗಂಟೆಯಲ್ಲಿ ಕುಡಿದು ಹೋಗಿ ಇ.ಇ ರವರಿಗೆ ಅವಮಾನ ಮಾಡಿಬಿಟ್ಟಿದ್ದಾರಲ್ಲದೆ ಹೊಡೆದಿದ್ದಾರೆ. ಇ.ಇ ರವರು ಇದರ ಬಗ್ಗೆ ಸಿಇಒ ರವರಿಗೆ ದೂರನ್ನು ಕೊಟ್ಟಿದ್ದು ಆ ದೂರನ್ನು ಸಿಇಒ ರವರು ಎಸ್.ಪಿ ಯವರಿಗೆ ಕಳುಹಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸದಸ್ಯರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಆಗದಿದ್ದರೆ, ಆಫೀಸರ್‌ಗಳಿಗೆ ರಕ್ಷಣೆ ಈ ಸರ್ಕಾರ ಕೊಡುತ್ತದೋ ಅಥವಾ ಇಲ್ಲವೋ ಅದನ್ನಾದರೂ ಹೇಳಿ ಹೀಗಾಗಿ ನಮ್ಮ ಜಿಲ್ಲೆಯಲ್ಲಿರುವ ಒಳ್ಳೆಯ ಅಧಿಕಾರಿಗಳು ವರ್ಗಾವಣೆ ಮಾಡಿಸಿಕೊಂಡು ಬೇರೆ ಕಡೆಗೆ ಹೋಗುತ್ತಿದ್ದಾರೆ, ಹೀಗಾಗಿ ಅಲ್ಲಿ ಯಾವುದೇ ಕೆಲಸ ನಡೆಯದೆ, ಒಳ್ಳೆಯ ವಾತಾವರಣ ಇಲ್ಲದೇ ಭಯದ ವಾತಾವರಣ ಉಂಟಾಗಿದೆ.

4.40 ಪಿ.ಎಂ

ಈ ರೀತಿ ಇದ್ದಾಗ ಕೊನೆಯಪಕ್ಷ ಸದಸ್ಯರುಗಳ ಮೇಲೆ ನೀವು ಆ್ಯಕ್ಷನ್‌ನ್ನು ತೆಗೆದುಕೊಳ್ಳಲಿಲ್ಲ, ಅದು ಹೋಗಲಿ, ಇದು ಪೊಲಿಟಿಕಲ್ ಡಿಸಿಷನ್; ಅದಕ್ಕೆ ನಿಮ್ಮ ಹತ್ತಿರ ಕಮಿಟ್‌ಮೆಂಟ್ ಇಲ್ಲ; ಇದು ನಿಮಗೆ ಗೊತ್ತಾಗಿದೆ. ಆದರೆ ಅಡ್ಮಿನಿಸ್ಟ್ರೇಟಿವ್ ಡಿಸಿಷನ್‌ನ್ನಾದರೂ ನೀವು ತೆಗೆದುಕೊಳ್ಳುವ ತಾಕತ್ತು ಇದೆಯೋ ಅಥವಾ ಇಲ್ಲವೋ ಅದನ್ನಾದರೂ ತಾವು ಹೇಳಬೇಕು.

(ಗೊಂದಲ)

ಶ್ರೀ ಎಂ.ಜಿ. ಮುಳೆ(ಬಸವಕಲ್ಯಾಣ): ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಅಧಿಕಾರವಿದೆ ಅವರು ಮಾಡಿರತಕ್ಕಂಥದ್ದು ಕಾನೂನಿನ ಪ್ರಕಾರವಾಗಿದೆ. ಅಲ್ಲಿ ಏನು ನಡೆದಿದೆ ಅದರ ಬಗ್ಗೆ ಎನ್‌ಕ್ವಯರಿ ಆಗುತ್ತಿದೆ, ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಇದರ ಬಗ್ಗೆ ಲೋಕಾಯುಕ್ತದವರಿಂದ ಎನ್‌ಕ್ವಯರಿ ಮಾಡುವ ಬಗ್ಗೆ ಆರ್ಡರ್‌ನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಪದೇ ಪದೇ ಅದೇ ಇಷ್ಯೂವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯಿತಿಯ ಚುನಾವಣೆಯಲ್ಲಿ ಒಂದು ಸೀಟನ್ನು ಗೆಲ್ಲಲು ಸಾಧ್ಯವಾಗಲಿಲ್ಲವಾದ ಕಾರಣದಿಂದ ಆದರೆ ಡಿಫೀಟ್ ಆಗಿದೆ ಎಂದು ಪದೇಪದೇ ಅವರು ಅದನ್ನು ರಿಪೀಟ್ ಮಾಡುತ್ತಿದ್ದಾರೆ. ಏನಾದರೂ ಅಲ್ಲಿ ಹೆಚ್ಚುಕಡಿಮೆಯಾಗಿದ್ದರೆ ನಿಜವಾಗಿಯೂ ತನಿಖೆ ನಡೆಯುತ್ತಿದೆ ಅನಂತರ ತಿಳಿಯುತ್ತದೆ ಅವರು ಎನ್‌ಕ್ವಯರಿ ರಿಪೋರ್ಟ್ ಬರುವರೆಗೂ ಕಾಯುವುದಕ್ಕೆ ಅವರು ಸಿದ್ಧರಿಲ್ಲ. ಇದು ಹೌಸಾ ಅಥವಾ ಬೇರೆ ಒಂದು ವೇದಿಕೆನಾ? ಅವರು ಒಂದೇ ವಿಷಯದ ಬಗ್ಗೆ ರಿಪೀಟ್ ಮಾಡುತ್ತಿದ್ದಾರೆ. ಲೋಕಾಯುಕ್ತದವರಿಂದ ಎನ್‌ಕ್ವೆಯರಿ ನಡೆಯುತ್ತದೆ, ಅನಂತರ ಇದೆಲ್ಲವು ಸರಿಯಾಗುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಎಂ. ದಿವಾಕರಬಾಬು(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:22ನೇ ಮಾರ್ಚ್ 2001ನೇ ರಾತ್ರಿ 12 ಗಂಟೆಯಲ್ಲಿ ಈ ದುರ್ಘಟನೆಯು ನಡೆದಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಪೊಲೀಸ್ ಕಂಪ್ಲೈಂಟ್‌ನ್ನು ಕೊಟ್ಟಿದ್ದಾರೆ. ಪೊಲೀಸ್ ಕೇಸ್ ದಾಖಲಾದ ನಂತರ ಏನು ಆ್ಯಕ್ಷನ್ ಬರುತ್ತದೆ ಅದರ ಪ್ರಕಾರ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾರ್ಯಾರು ತಪ್ಪನ್ನು ಎಸಗಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**7. ವಿಧಾನಸಭೆಯ ಸದಸ್ಯ ಮಂತ್ರಿಗಳ ಹೇಳಿಕೆ: ಶ್ರೀ ಬಿ. ಸೋಮಶೇಖರ್‌ರವರ ಹೆಸರನ್ನು ವಿಧಾನಪರಿಷತ್ತಿನ ಸದಸ್ಯರೊಬ್ಬರು ಅಲ್ಲಿಯ ಸದನದಲ್ಲಿ ಪ್ರಸ್ತಾಪಿಸಿರುವ ಬಗ್ಗೆ**

+ ಶ್ರೀ ಡಿ.ಕೆ. ಶಿವಕುಮಾರ್(ಮಾನ್ಯ ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಸೋಮಶೇಖರ್‌ರವರು ತಮಗೆ ಒಂದು ಪತ್ರವನ್ನು ಬರೆದು ನನ್ನ ಮೇಲೆ ಕೆಲವೊಂದು ಆರೋಪಗಳನ್ನು ಮೇಲ್ಮನೆಯ ಸದಸ್ಯರು ಮಾಡಿದ್ದಾರೆ ಇದಕ್ಕೆ ಸಹಕಾರಿ ಸಚಿವರು ಸಮ್ಮತಿಸಿ ಸಿಓಡಿ ತನಿಖೆಗೆ ಒಪ್ಪಿಸಿರುವುದಾಗಿ ವರದಿಯನ್ನು ನೀಡಿದ್ದು ನನ್ನ ಮೇಲೆ ಕೆಲವು ಸುಳ್ಳು ಆರೋಪಗಳನ್ನು ಮಾಡಿ ನನ್ನ ಚಾರಿತ್ರ್ಯಕ್ಕೆ ಧಕ್ಕೆ ಬಂದಿರುತ್ತದೆ, ಇದು ನನ್ನ ಹಕ್ಕಿನ ವಿಷಯವಾಗಿರುತ್ತದೆ, ಇದರ ಬಗ್ಗೆ ನಾನು ಉತ್ತರವನ್ನು ಕೊಡಲು ಈ ಅಧಿವೇಶನದಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದ್ದು ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ತಾವು ನನ್ನ ಹೆಸರನ್ನು ಯಾವಾಗ ಕರೆಯುತ್ತೀರೆಂದು ನನಗೆ ಗೊತ್ತಾಗಲಿಲ್ಲ, ನಾನು ಆಗ ಮೇಲ್ಮನೆಯಲ್ಲಿದ್ದೆ. ಆಗ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿ, ಮಾನ್ಯ ಸಚಿವರು ಬೆಳಗಿನಿಂದ ಮಧ್ಯಾಹ್ನದವರೆಗೆ ಸದನದಲ್ಲಿದ್ದು ಈಗ ಪ್ರಶ್ನೆ ಬರುವಂತಹ ಸಂದರ್ಭದಲ್ಲಿ ಹೊರಗಡೆ ಹೋಗಿದ್ದಾರೆ ಇದರ ಅರ್ಥವೇನು?